ದಿನಾಂಕಃ 13-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಆರ್ ಜೆ ವಕೀಲರಿಂದಃ**

ನನ್ನ ಗಂಡ ಪುರಂದರಪ್ಪನವರಿಗೆ 4 ಜನ ಅಣ್ಣ ತಮ್ಮಂದಿರು. ಖಾತಾ ನಂ 243 ರಲ್ಲಿ ಒಟ್ಟು 18 ಗುಂಟೆ ಆಸ್ತಿ ಇತ್ತು. ಸದರಿ ಆಸ್ತಿಯ ಕುರಿತು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ 18 ಗುಂಟೆ ಆಸ್ತಿಯಲ್ಲಿ ಪಾಲುವಿಭಾಗದ ಮೂಲಕ ನನಗೆ ದಾವಾಸ್ತಿ ಬಂದಿರುತ್ತದೆ ಮತ್ತು ಸದರಿ 18 ಗುಂಟೆ ಪೈಕಿ ನನ್ನಗಂಡನ ಅಣ್ಣ ತಮ್ಮಂದಿರು ದಾವಾಸ್ತಿಯನ್ನು ಹೊರತುಪಡಿಸಿ ಯಾರು ಯಾರು ಎಷ್ಟು ಎಷ್ಟು ಜಮೀನನ್ನು ಹಿಸ್ಸಾ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ಸದರಿ 18 ಗುಂಟೆ ಜಮೀನಿನಲ್ಲಿ ನನಗೂ ಹಿಸ್ಸಾ ಬಂದಿರುವ ಕಾರಣ ಸದರಿ ದಾವಾಸ್ತಿಯ ಅಕ್ಕಪಕ್ಕ ನನ್ನ ಗಂಡನ ಸಹೋದರರ ಆಸ್ತಿಯೇ ಬರಬೇಕು ಎಂದರೆ ಸರಿ. ನನ್ನ ಗಂಡ ಮತ್ತು ಆತನ ಸಹೋದರರು ಪಾಲುವಿಭಾಗ ಪತ್ರ ಮಾಡಿಕೊಳ್ಳುವ ಸಮಯಕ್ಕೆ ಯಾವ ದಾಖಲೆಯ ಆಧಾರದ ಮೇಲೆ ಚೆಕ್ಕುಬಂದಿಗಳನ್ನು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಸದರಿ 18 ಗುಂಟೆ ಕುರಿತು ಯಾವುದೇ ದಾಖಲೆಗಳು ಇಲ್ಲದೆ ಇದ್ದರು ಸಹ ಸುಳ್ಳು ಚೆಕ್ಕುಬಂದಿಗಳನ್ನು ನಮೂದಿಸಿ ಸುಳ್ಳು ಪಾಲುವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಉಲ್ಲೇಖಿಸಿರುವಂತೆ ನನ್ನ ಗಂಡನ ಹಿಸ್ಸೆಗೆ ಬಂದ 5 ನೇಷೆಡ್ಯೂಲ್ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಜಾಗ, ಪಶ್ಚಿಮಕ್ಕೆ ಎಂ ಹೆಚ್ ರಾಜಶೇಖರಪ್ಪನವರ ಕಣ, ಉತ್ತರಕ್ಕೆ ಇದೇ ಸರ್ವೆ ನಂ ನ ಜಯದೇವಪ್ಪನವರ ಹಿಸ್ಸೆ, ದಕ್ಷಿಣಕ್ಕೆ ಪ್ರತಿವಾದಿಗಳ ತಂದೆಯ ಆಸ್ತಿ ಎಂದರೆ ಸರಿ.

ಆದರೆ ನಿಪಿ-5 ರಲ್ಲಿ ಉಲ್ಲೇಖಿಸಿರುವ ನನ್ನ ಗಂಡನ ಹಿಸ್ಸೆಗೆ ಬಂದ ಚೆಕ್ಕುಬಂದಿಗೂ ದಾವಾಸ್ತಿಯಲ್ಲಿ ಉಲ್ಲೇಖಿಸಿರುವ ಚೆಕ್ಕುಬಂದಿಗೂ ವ್ಯತ್ಯಾಸವಿದೆ ಎಂದರೆ ಸಾಕ್ಷಿ ಪೂರ್ವಕ್ಕೆ ಸರ್ಕಾರಿ ಜಾಗ ಮತ್ತು ನಾಡಿಗರ ಕೆಂಚಪ್ಪನವರ ಜಾಗ ಇದೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ದಾವಾಸ್ತಿಯ ಪೂರ್ವದ ದಿಕ್ಕಿಗೆ ಸರ್ಕಾರಿ ಜಾಗ ಮತ್ತು ನಾಡಿಗರ ಕೆಂಚಪ್ಪನವರ ಜಾಗ ಎಂದು ನಮೂದಿಸಲು ನನಗೆ ಯಾವುದೇ ತೊಂದರೆಯಿರಲಿಲ್ಲ. ಅದೇ ರೀತಿ ದಾವಾಸ್ತಿಯ ಉತ್ತರಕ್ಕೆ ಚಿರಡೋಣಿ ನವಿಲೇಹಾಳ್ ರಸ್ತೆ ಎಂದು ಉಲ್ಲೇಖವಿದ್ದು ಆದರೆ ನಿಪಿ-5 ರಲ್ಲಿ ಉಲ್ಲೇಖವಿರುವಂತೆ ಉತ್ತರ ದಿಕ್ಕಿನ ಚೆಕ್ಕುಬಂದಿ ನಿಪಿ-5 ರ 7 ನೇ ಪಾರ್ಟಿಯಾದ ಜಯದೇವಪ್ಪನವರ ಹಿಸ್ಸೆ ಎಂದು ಉಲ್ಲೇಖವಿದೆ ಎಂದರೆ ಸರಿ. ಅದೇ ರೀತಿ ದಾವೆ ಹೂಡುವ ಕಾಲಕ್ಕೆ ದಾವಾಸ್ತಿಯ ದಕ್ಷಿಣದ ಚೆಕ್ಕುಬಂದಿಯನ್ನು ಪಂಚಾಯತಿ ರಸ್ತೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ತಿದ್ದುಪಡಿ ಪೂರ್ವ ದಾವಾಸ್ತಿಯ ಚೆಕ್ಕುಬಂದಿಯೊಳಗೆ ನಾನು ಸ್ವಾಧೀನದಲ್ಲಿಇರುವ ಕುರಿತು ದಾವೆ ಹೂಡಿದ್ದೆ ಎಂದರೆ ಸರಿ.

ಹಾಗಾಗಿ ನ್ಯಾಯಾಲಯ ತಾತ್ಕಾಲಿಕ ನಿರ್ಬಂದಕಾಜ್ಞೆಗಾಗಿ ಹೂಡಿದ್ದ ಮಧ್ಯಂತರ ಅರ್ಜಿ ವಜಾ ಆಯಿತು ಎಂದರೆ ಸರಿ. ಹಾಗಾಗಿ ನಾನು ಸಲ್ಲಿಸಿದ ಈ ದಾವೆ ಮಧ್ಯಂತರ ಅರ್ಜಿಯಲ್ಲಿ ಒಂದು ಚೆಕ್ಕುಬಂದಿ ನಮೂದಿಸಿದ್ದು ತದನಂತರ ತಿದ್ದುಪಡಿ ಮುಖಾಂತರ ಸದರಿ ಚೆಕ್ಕುಬಂದಿಗಳನ್ನು ತಿದ್ದುಪಡಿ

ಮಾಡಿ ತಿದ್ದುಪಡಿ ವಾದಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಹಾಗಾಗಿ ದಾವಾ ಹೂಡುವ ಕಾಲಕ್ಕೆ ಒಂದು ಚೆಕ್ಕುಬಂದಿಯನ್ನು ನಮೂದಿಸಿ ತದ ನಂತರ ಸದರಿ ಚೆಕ್ಕುಬಂದಿಗಳನ್ನು ತಿದ್ದುಪಡಿ ಮಾಡಿದ ಪ್ರಯುಕ್ತ ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ನಾನು ಅರ್ಹರಲ್ಲ ಎಂದರೆ ಸರಿಯಲ್ಲ.

ತಿದ್ದುಪಡಿ ವಾದಪತ್ರದಲ್ಲಿ ನಮೂದಿಸಿರುವ ದಾವಾಸ್ತಿಯ ಚೆಕ್ಕುಬಂದಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಈ ದಾವೆಗೆ ಪ್ರತಿವಾದಿಗಳು ಸಲ್ಲಿಸಿರುವ ತಕರಾರನ್ನು ತಿಳಿದುಕೊಂಡಿರುವುದಿಲ್ಲ.

1 ನೇ ಪ್ರತಿವಾದಿಯ ತಂದೆಗೆ ಆಸ್ತಿ ಸಂಖ್ಯೆ 222 ಪೂರ್ವ-ಪಶ್ಚಿಮ 24 ಅಡಿ/2 ಉತ್ತರ-ದಕ್ಷಿಣ 78 ಅಡಿ ಒಟ್ಟು 2808 ಚದುರಡಿಯ ಆಸ್ತಿ ಪ್ರತಿವಾದಿಗೆ ಇದೆ ಎಂದರೆ ಸಾಕ್ಷಿ ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ಅಸ್ತಿಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಅವರ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ದಿಃ02-02-2021 ರಲ್ಲಿ ಪ್ರತಿವಾದಿಗಳು ದಾವಾಸ್ತಿಯಲ್ಲಿ ಒತ್ತುವರಿ ಮಾಡಲು ಪ್ರಯತ್ನಿಸಿದರು. ನಾನು ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ನಾನು ಅಳತೆ ಮಾಡಿಸಿರುತ್ತೇನೆ. ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ತೊಂದರೆ ಕೊಟ್ಟ ದಿನದಂದೆ ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಯಾವುದೇ ಆಸ್ತಿಗೆ ಸರಿಯಾದ ವಿಸ್ತೀರ್ಣ, ಅಳತೆ ಮತ್ತು ಚೆಕ್ಕುಬಂದಿ ಇದ್ದರೆ ಮಾತ್ರ ಇ-ಸ್ವತ್ತನ್ನು ಕೊಡುತ್ತಾರೆ ಎಂದರೆ ಸರಿ. ಸದರಿ ಇ-ಸ್ವತ್ತನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೆ ಯಾವುದೇ ತೊಂದರೆಯಿಲ್ಲ.

(ಮುದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.